ಉ) ಉದ್ಭವಿಸುವುದಿಲ್ಲ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ: ಗುಲ್ಬರ್ಗ ಜಿಲ್ಲೆಯ ತೊಗರಿ ಬೆಳೆ ನಾಶವಾಗಿರುವ ಪರಿಹಾರಧನ 7,67,33,000 ರೂಪಾಯಿಗಳನ್ನು ವಿಚಾರಣೆ ಮಾಡಿದ ನಂತರ ಉಳಿದಿರುವ ಹಣ 2,07,67,000 ರೂಪಾಯಿಗಳನ್ನು ಬಡ ರೈತರಿಗೆ ವಿತರಣೆ ಮಾಡಲು ಸುಮಾರು ಒಂದು ವರ್ಷ ವಿಳಂಬ ಆಗಿರುತ್ತದೆ ಅಲ್ಲವೇ? ಈಗ 21-3-94 ರಂದು ಉಳಿದಿರುವ ಹಣ ಎರಡು ಕೋಟಿ ಏಳು ಲಕ್ಷ, 67 ಸಾವಿರ ರೂಪಾಯಿ ಬಿಡುಗಡೆ ಆಗಿದ್ದು ಒಂದು ವಾರದ ಒಳಗೆ ವಿತರಣೆ ಮಾಡುವ ವ್ಯವಸ್ಥೆ ಮಾಡಬಹುದೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ: ಹಣ ಬಿಡುಗಡೆ ಆಗಿದೆ.

ಅಧ್ಯಕ್ಷರು: ಟಿ.ಬಿ. ಜಯಚಂದ್ರರವರೇ ನಿಮ್ಮ 692ನೇ ಪ್ರಶ್ನೆಗೆ ಮಂತ್ರಿಗಳು ಕಾಲಾವಕಾಶ ಕೋರಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ: ಕೆರೆ ಕೆಲಸಗಳು ಆಗುವಂತಹ ಲಕ್ಷಣಗಳು ಕಾಣುತ್ತಿಲ್ಲ ನಮ್ಮ ಅವಧಿ ಮುಗಿಯುವುದರೊಳಗಾದರೂ ಉತ್ತರ ಬರುತ್ತದೆಯೆ?

ಅಧ್ಯಕ್ಷರು: ಆಯಿತು.

ಮೂಡಬಿದರೆಯ ನ್ಯಾಯಬಸದಿಯಲ್ಲಿ ತೋಟಗಾರಿಕಾ ಉದ್ಯಾನವನ

560 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ): ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಬಿದರೆಯ ನ್ಯಾಯ ಬಸದಿಯ ಬಳಿ ತೋಟಗಾರಿಕಾ ಇಲಾಖೆಯಲ್ಲಿ ಎಷ್ಟು ಎಕರೆ ಸ್ಥಳವಿದೆ?

ಆ) ಈ ಬಾರಿ ನೆರಳಿನ ಎಷ್ಟು ಗಿಡಗಳನ್ನು ನೆಡಲಾಗಿದೆ?

ಇ) ಈ ಗಿಡಗಳಿಗೆ ನೀರು ಒದಗಿಸಲು ಏನು ವ್ಯವಸ್ಥೆ ಮಾಡಲಾಗಿದೆ?

ಈ) ಇದರ ಮೇಲ್ವಿಚಾರಣೆ ಮಾಡಲು ಸೇವಕರನ್ನು ನೇಮಕ ಮಾಡಲಾಗಿದೆಯೇ?

ಉ) ಈ ತೋಟದ ಸಂಪೂರ್ಣ ಅಭಿವೃದ್ಧಿ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಳ್ಳುವುದು?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಮಂತ್ರಿಗಳು):

ಅ) 8.20 ಎಕರೆ

ಆ) 1993ನೇ ಸಾಲಿನಲ್ಲಿ ಜೂನ್ ಮತ್ತು ಜುಲೈ ಮಾಹೆಯಲ್ಲಿ 5,000 ಗಿಡಗಳನ್ನು ನೆಡಲಾಗಿದೆ.

ಇ) ಒಂದು ಕೊಳವೆ ಬಾವಿಯಿಂದ ನೀರನ್ನು ಒದಗಿಸಲಾಗಿದೆ.

ಈ) ಇದರ ಮೇಲ್ವಿಚಾರಣೆಗೆ ಒಬ್ಬ ಕಾವಲುಗಾರನನ್ನು ನೇಮಿಸಲಾಗಿದೆ.

ಉ) 1994-95ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆವತಿಯಿಂದ ಸುಂದರ ರಾಕ್ ಗಾರ್ಡ್ನ ಅಭಿವೃದ್ಧಿಪಡಿಸಲು ಕಾರ್ಯಕ್ರಮ ಯೋಜಿಸಲಾಗಿದೆ. ಈ ಬಗ್ಗೆ ಒಂದು ಯೋಜನೆಯನ್ನು ತಯಾರಿಸಿ ಶೀಘ್ರವೇ ಅನುಷ್ಠಾನಕ್ಕೆ ತರಲಾಗುವುದು.

ಶ್ರೀ ಕೆ. ಸೋಮಪ್ಪ ಸುವರ್ಣ: ಸನ್ಮಾನ್ಯ ಅಧ್ಯಕ್ಷರೇ, ಮೂಡಬಿದರೆಯ ಚಾರಿತ್ರಿಕ ನ್ಯಾಯ ಬಸಿದಿಯ ಸುಂದರ ಸ್ಥಳದಲ್ಲಿ 5 ಸಾವಿರ ಸಸಿಗಳನ್ನು ಈ ಸಾರಿ ತೋಟಗಾರಿಕಾ ಇಲಾಖೆಯವರು ನೆಟ್ಟಿದ್ದಾರೆ. ಅಲ್ಲಿ ಒಂದು ಕೊಳವೆ ಬಾವಿಯನ್ನು

ತೆಗೆದಿದ್ದು ಅದಕ್ಕೆ ವಿದ್ಯುತ್ ಪಂಪನ್ನೂ ಸಹ ಜೋಡಣೆ ಮಾಡಿ ವಿದ್ಯುತ್ತಿನ ಸಂಪರ್ಕ ನೀಡದಿರುವುದರಿಂದ ನೀರನ್ನು ಸಸಿಗಳಿಗೆ ಒದಗಿಸಲಾಗಿದೆ 5 ಸಾವಿರ ಸಸಿಗಳು ಏಪ್ರಿಲ್ ಮೇ ತಿಂಗಳಿನಲ್ಲಿ ಒಣಗಿ ಹೋಗಿ ಅವುಗಳ ಬದಲಿಗೆ ಬರುವ ವರ್ಷ ಹೊಸ ಸಸಿಗಳನ್ನು ನೆಡುವಂತಹ ಪರಿಸ್ಥಿತಿ ಬಂದಿದೆ. ಆದ್ದರಿಂದ ಈ ತೋಟದ ರಕ್ಷಣೆಗೆ ಮತ್ತು ಆ ಚಾರಿತ್ರಿಕ ನ್ಯಾಯಬಸಿದಿಯ ಸೌಂದರ್ಯವನ್ನು ಹೆಚ್ಚಿಸುವಂತಹ ಯೋಜನೆಯನ್ನು ಅಳವಡಿಸಿದಂತ ತಾವುಗಳು ನೀರನ್ನು ಕೊಡಿಸಲಿಕ್ಕೆ ಏಕೆ ಸೂಕ್ತ ಕ್ರಮವನ್ನು ಕೈಗೊಳ್ಳಬಾರದು ಎಂದು ತಮ್ಮನ್ನು ಕೇಳುತ್ತಿದ್ದೇನೆ.

ಶ್ರೀ ಎ. ಕೃಷ್ಣಪ್ಪ: ಮಾನ್ಯ ಸಭಾಧ್ಯಕ್ಷರೇ, ಕೊಳವೆಬಾವಿ ವಿಚಾರದಲ್ಲಿ ಹೇಳಿದ್ದಾರೆ. ಈಗಾಗಲೇ ಕ್ರಮ ತೆಗೆದುಕೊಂಡಿದ್ದೇನೆ ಮತ್ತು ಅಲ್ಲಿ ಸುಂದರವಾದಂತಹ ವಾತಾವರಣವನ್ನು ಸೃಷ್ಟಿ ಮಾಡಲಿಕ್ಕೆ ಏನೇನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಸರ್ಕಾರ ಈ ಆರ್ಥಿಕ ವರ್ಷದಲ್ಲಿ ತೆಗೆದುಕೊಳ್ಳುತ್ತದೆ ಎನ್ನುವ ಮಾತನ್ನು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ಕೆ. ಸೋಮಣ್ಣ ಸುವರ್ಣ: ಮಾನ್ಯ ಅಧ್ಯಕ್ಷರೆ, ಏಪ್ರಿಲ್ ಮೇ ತಿಂಗಳಲ್ಲಿ ಬಹಳಷ್ಟು ಬಿಸಿಲಿರುವುದರಿಂದ ಅಲ್ಲಿರುವ ಸಸಿಗಳೆಲ್ಲ ಒಣಗಿಹೋಗುವ ಕಾರಣ ನೀವು ಇಷ್ಟೆಲ್ಲಾ ಖರ್ಚುಮಾಡಿದರೂ ಸಹ ನೀರಿನಲ್ಲಿ ಹೋಮ ಮಾಡಿದಂತೆ ಆಗುತ್ತದೆ. ಆದ್ದರಿಂದ ಕೂಡಲೇ ವಿದ್ಯುತ್ ಜೋಡಣೆ ಮಾಡಿ ಆ ನೀರನ್ನು ಸಸಿಗಳಿಗೆ ಉಣಿಸುವಂತಹ ಕೆಲಸವನ್ನು ಕೂಡಲೇ ಮಾಡಬೇಕು, ಯಾವಾಗ ಮಾಡುತ್ತೀರಾ ಎಂದು ತಮ್ಮನ್ನು ಕೇಳುತ್ತಿದ್ದೇನೆ.

ಶ್ರೀ ಎ. ಕೃಷ್ಣಪ್ಪ: ಒಂದು ತಿಂಗಳ ಒಳಗಡೆ ಅವರು ಕೇಳಿರುವ ಸೌಕರ್ಯವನ್ನು ಒದಗಿಸಿಕೊಡಲಾಗುವುದು.

ಅಧ್ಯಕ್ಷರು: ಶ್ರೀ ಕೆ. ಸಿದ್ಧಯ್ಯನವರೇ ನಿಮ್ಮ 592ನೇ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಕಾಲಾವಕಾಶವನ್ನು ಕೋರಿದ್ದಾರೆ.

ಮಂಗಳೂರು ಜನತಾ ಬಜಾರ್‌ನಲ್ಲಿ ಅವ್ಯವಹಾರ

498 - ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮಂಗಳೂರು ಜನತಾ ಬಜಾರ್ ಕಳೆದ 5 ವರ್ಷಗಳಿಂದ ವ್ಯಾಪಕ ನಷ್ಟ ಅನುಭವಿಸಿರುವುದು ನಿಜವೇ?*

ಆ) *ಜನತಾ ಬಜಾರ್ನ "ನಿರ್ದೇಶಕ ಮಂಡಳಿಯ" ಸದಸ್ಯರು ಸಹಕಾರ ಕಾಯ್ದೆಗೆ ವ್ಯತಿರಿಕ್ತವಾಗಿ ನಿರ್ದೇಶಕರಾಗಿ ಮುಂದುವರಿದಿರುವುದು ಇಲಾಖೆಯ ಗಮನಕ್ಕೆ ಬಂದಿದೆಯೇ?*

ಇ) *ಜನತಾ ಬಜಾರ್ನ ನೇಮಕಾತಿಗಳಲ್ಲಿ "ಮೀಸಲಾತಿ" ನಿಯಮಗಳನ್ನು ಅನ್ವಯಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಈ) *ಜನತಾ ಬಜಾರ್ನ ಆಡಳಿತ ಮಂಡಳಿಯನ್ನು ರದ್ದುಗೊಳಿಸಿ ಆಡಳಿತಾಧಿಕಾರಿ ನೇಮಕ ಮಾಡಲು ಕ್ರಮ ಕೈಗೊಳ್ಳಲಾಗುವುದೇ?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):

ಅ) ಹೌದು.

ಆ) ಹೌದು. (ಇಬ್ಬರು ಸದಸ್ಯರ ಬಗ್ಗೆ ಮಾತ್ರ)

ಇ) ಹೌದು